ಅ) ಈ ಗುರಿ ಈಡೇರಿದೆಯೇ?

ಇ) ಈ ಪದ್ಧತಿಯನ್ನು ಹೆಚ್ಚು ಅರ್ಥ ಪೂರ್ಣವಾಗಿ ಜಾರಿಗೆ ತರಲು ಯೋಜನೆ ಸರ್ಕಾರಕ್ಕೆ ಇದೆಯೆ?

ಈ) ಈ ಇಲಾಖೆಯಡಿಯಲ್ಲಿ ಹಾಲಿ ಎಷ್ಟು ವಿದ್ಯಾಪೀಠಗಳು ಕಾರ್ಯ ನಿರ್ವಹಿಸುತ್ತಿವೆ?

ಉ) ಈ ವಿದ್ಯಾಪೀಠಗಳನ್ನು ಪೂರ್ಣಕಾಲಿಕವಾಗಿ ಬಳಸಿಕೊಳ್ಳಲು ಅನುವಾಗುವಂತೆ ನಿರುದ್ಯೋಗಿ ಯುವಕರಿಗೆ ತರಬೇತಿ ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಊ) ಈ ವಿದ್ಯಾ ಪೀಠಗಳನ್ನು ಅಭಿವೃದ್ಧಿ ಪಡಿಸಿ ಉತ್ತಮ ಫಲ ಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ನಿರಕ್ಷರತೆಯನ್ನು ಹೋಗಲಾಡಿಸಿ ಸಾಕ್ಷರಸ್ಥರಿಗೆ ಸ್ವಾವಲಂಬಿಗಳಾಗಿ ಬದುಕಲು ಗ್ರಾಮೀಣ ನಿರುದ್ಯೋಗಿ ಯುವ ಜನರಿಗೆ ವೃತ್ತಿ ಕೌಶಲ್ಯ ತರಬೇತಿಗೆ ಅವಕಾಶವನ್ನು ಕಲ್ಪಿಸಿಕೊಡುವುದು.

ಆ) ಈಡೇರಿಕೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇ) ಈ ಪದ್ಧತಿಯನ್ನು ಹೆಚ್ಚು ಅರ್ಥಪೂರ್ಣವಾಗಿ ಜಾರಿಗೆ ತರಲು ರಾಜ್ಯದಲ್ಲಿ ಸಾಕ್ಷರೋತ್ತರ, ಮುಂದುವರಿಕೆ ಶಿಕ್ಷಣ ಮತ್ತು ವಿದ್ಯಾಪೀಠಗಳಲ್ಲಿ ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಈ) ಪ್ರಸ್ತುತ ಕರ್ನಾಟಕ ರಾಜ್ಯಾದ್ಯಂತ 16 ವಿದ್ಯಾ ಪೀಠಗಳು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಉ) ಹೌದು.

ಊ) 1995-96ನೇ ಸಾಲಿನಿಂದ ವಿದ್ಯಾಪೀಠಗಳನ್ನು ಅಭಿವೃದ್ಧಿಪಡಿಸಿ ಉತ್ತಮ ಫಲ ಪಡೆಯಲು ಸರ್ಕಾರವು ಯೋಜನಾ ಬಾಬ್ತಿನಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

## ಕುವೆಂಪು ವಿ.ವಿ. ಯಲ್ಲಿ ಅಕ್ರಮವಾಗಿ ನೇಮಕ

2901 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುವೆಂಪು ವಿಶ್ವ ವಿದ್ಯಾಲಯದಲ್ಲಿ ಅಕ್ರಮವಾಗಿ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿರುವುದು ನಿಜವೇ? ಹಾಗಿದ್ದಲ್ಲಿ, ಎಷ್ಟು ಜನ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ?

ಆ) ಈ ನೇಮಕಕ್ಕೆ ಸಂಬಂಧಪಟ್ಟಂತೆ ಥಾಮಸ್ ನೇತೃತ್ವದ ಸಮಿತಿಯನ್ನು ಸರ್ಕಾರ ಎಂದು

*ನೇಮಕ ಮಾಡಿದೆ? ಸಮಿತಿ ವರದಿ ನೀಡಿದೆಯೆ? ವರದಿಯಲ್ಲಿ ಪ್ರಸ್ತಾಪಿತ ಅಂಶಗಳು ಏನು?*

ಡಾ|| ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು 27, 1998ನೇ ಸಾಲಿನಲ್ಲಿ

ಆ) ಕುಲಪತಿಗಳು ತಮ್ಮ ದಿನಾಂಕ : 30-12-98ರ ಆದೇಶದಲ್ಲಿ ಶ್ರೀ ಪಿ.ಎಸ್.ಎಸ್. ಥಾಮಸ್ ರವರ ನೇತೃತ್ವದ ಸಮಿತಿಯನ್ನು ನೇಮಕ ಮಾಡಿದ್ದರು. ವಿಚಾರಣಾಧಿಕಾರಿಯವರು ದಿನಾಂಕ : 30-03-99ರಂದು ವರದಿಯನ್ನು ಸಲ್ಲಿಸಿದ್ದರು. ನೇಮಕಾತಿಯಲ್ಲಿನ ತೀವ್ರ ಅಕ್ರಮತೆಯನ್ನು ವಿಶ್ಲೇಷಿಸಲಾಗಿದೆ.

## ಆರೋಗ್ಯ ಇಲಾಖೆಯಲ್ಲಿ ವೈದ್ಯರ ಹುದ್ದೆಯ ನೇಮಕಾತಿ

2902 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಒಟ್ಟು ಎಷ್ಟು ವೈದ್ಯರ ಹುದ್ದೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಖಾಲಿ ಇವೆ? (ಪ್ರತ್ಯೇಕವಾಗಿ ಜಿಲ್ಲಾವಾರು ವಿವರ ನೀಡುವುದು)*

*ಆ) ನೇಮಕಾತಿ ನೀಡಿದ ನಂತರವೂ ಗ್ರಾಮಾಂತರ ಪ್ರದೇಶಕ್ಕೆ ಹೋಗಲು ವೈದ್ಯರು ನಿರಾಕರಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ ಅಂತಹವರ ಸಂಖ್ಯೆ ಎಷ್ಟು? ಇವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು?*

ಡಾ|| ಎ.ಬಿ. ಮಾಲಿಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪಟ್ಟಣ ಪ್ರದೇಶ - 402

ಗ್ರಾಮಾಂತರ ಪ್ರದೇಶ - 195

ಆ) ಗ್ರಾಮೀಣ ಪ್ರದೇಶಗಳಿಗೆ ಹೊಸದಾಗಿ ನೇಮಕಗೊಂಡ 568 ವೈದ್ಯಾಧಿಕಾರಿಗಳ ಪೈಕಿ 163 ವೈದ್ಯರು ಗ್ರಾಮಾಂತರ ಪ್ರದೇಶದಲ್ಲಿ ನೇಮಕ ಮಾಡಿದ ಸ್ಥಳಗಳಿಗೆ ಹಾಜರಾಗಿರುವುದಿಲ್ಲ. ಕರ್ತವ್ಯಕ್ಕೆ ಹಾಜರಾಗುವ ಕಾಲಾವಕಾಶ ಮುಗಿದ ಅಭ್ಯರ್ಥಿಗಳು ಆಯ್ಕೆ ಪಟ್ಟಿಯಲ್ಲಿ ಅವರ ಹೆಸರುಗಳನ್ನು ಕಳೆದುಕೊಳ್ಳುವುದಲ್ಲದೆ ನೇಮಕಾತಿಯೂ ರದ್ದುಗೊಳ್ಳುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿಮಾಡಿ ಭರ್ತಿ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.